ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 19 ನೇ ಮಾರ್ಚ್, 2020

ಬೆಂಗಳೂರು ಮೆಟ್ರೋ ರೈಲು ಪ್ರಯಾಣ ದರದ ಬಗ್ಗೆ

ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) :-

1214 (1518) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ಮೆಟ್ರೊ ರೈಲು ಸಂಚಾರವನ್ನು ಯಾವಾಗ ಜಾರಿಗೆ ತರಲಾಯಿತು ;

(ಆ) ಪ್ರಾರಂಭದಲ್ಲಿ ಮೆಟ್ರೋ ರೈಲು ಪ್ರಯಾಣಕ್ಕೆ ನಿಗಧಿಪಡಿಸಲಾಗಿದ್ದ ಮೊತ್ತವೆಷ್ಟು ;

(ಇ) ಈವರೆಗೆ ಮೆಟ್ರೋ ರೈಲು ಪ್ರಯಾಣದ ದರವನ್ನು ಎಷ್ಟು ಬಾರಿ ಪರಿಷ್ಕರಿಸಲಾಗಿದೆ ; ಪ್ರಸ್ತುತ ನಿಗಧಿಪಡಿಸಿರುವ ದರವೆಷ್ಟು ; (ಕಾಲಕಾಲಕ್ಕೆ ಏರಿಸಲಾದ ದರದ ವಿವರ ನೀಡುವುದು)

(ಈ) ಮೆಟ್ರೊ ರೈಲು ಪಾಸುದಾರರಿಗೆ ಪ್ರಾರಂಭದಲ್ಲಿ ನೀಡಲಾಗುತ್ತಿದ್ದ ರಿಯಾಯಿತಿ ಶೇಕಡವಾರು ದರವೆಷ್ಟು ; ಪ್ರಸ್ತುತ ವಿಧಿಸಲಾಗುತ್ತಿರುವ ದರವೆಷ್ಟು ;

(ಉ) ನವದೆಹಲಿ, ಕೊಲ್ಕತ್ತ, ಜೈಪುರಗಳಿಗೆ ಹೋಲಿಸಿದಲ್ಲಿ ಬೆಂಗಳೂರು ಮೆಟ್ರೊ ವಿಧಿಸುತ್ತಿರುವ ದರವು ಅಧಿಕವಲ್ಲವೆ ;

(ಊ) ಮಟ್ರೋ ರೈಲು ಪ್ರಾರಂಭವಾದ ನಂತರ ಗಳಿಸಿರುವ ಆದಾಯವೆಷ್ಟು; ನಿಗಮವು ಆದಾಯದಲ್ಲಿ ನಡೆಯುತ್ತಿದೆಯೇ ; (ವರ್ಷವಾರು ವಿವರ ನೀಡುವುದು)

(ಋ) ನಿಗಮವು ಆದಾಯದಲ್ಲಿದ್ದರೆ, ಪ್ರಯಾಣಿಕರ ಹಿತದೃಷ್ಠಿಯಿಂದ ಮೆಟ್ರೊ ರೈಲು ದರವನ್ನು ಇಳಿಸಲಾಗುವುದೇ ;

(ಎ) ಕೆ.ಎಸ್.ಆರ್.ಟಿ.ಸಿ, ಬಿ.ಎಂ.ಟಿ.ಸಿ ಮತ್ತು ರೈಲ್ವೇ ಇಲಾಖೆಯ ಹಿರಿಯ ನಾಗರಿಕರಿಗೆ ರಿಯಾಯಿತಿ ದರ ನೀಡುತ್ತಿದ್ದು ಅದೇ ರೀತಿ ರಿಯಾಯಿತಿ ನೀಡಲು ಮೆಟ್ರೊ ರೈಲು ನಿಗಮಕ್ಕೆ ಇರುವ ತೊಂದರೆಯಾದರೂ ಏನು ?